# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.33/2012

**P.W.-03**
**Addl.Witness-01**

| | | |
|---|---|---|
| ಹೆಸರು | ಃ | ನಾಗರಾಜ ಕೆ.ಪಿ. |
| ತಂದೆಯ ಹೆಸರು | ಃ | ಪಾಪೇಗೌಡ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಸಹಾಯಕ ಇಂಜಿನಿಯರ್ |
| ವಾಸಸ್ಥಳ | ಃ | ಇನಕಲ್ |

ದಿನಾಂಕಃ **04-06-2019** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯಂತರರವರಿಂದ ಃ -

ದಿನಾಂಕಃ 05-11-2011 ರಂದು ಲೋಕಾಯುಕ್ತ ಪೊಲೀಸರು ನನಗೆ ಪತ್ರ ಬರೆದು ಆರೋಪಿಯ ತಂದೆಯ ಮನೆಯ (ಮನೆ ಸಂಖ್ಯೆಃ 305, ಹುಂಡಿ ಬೀದಿ, ಇನಕಲ್) ಎಸ್ಟಿಮೇಟನ್ನು ತಯಾರಿಸಲು ಮನವಿಯನ್ನು ಸಲ್ಲಿಸಿದೆವು. ಸದರಿ ಮನವಿಯ ಮೇರೆಗೆ ನಾನು ಆರೋಪಿಯ ತಂದೆಯ ಮನೆಯ ಎಸ್ಟಿಮೇಟನ್ನು ತಯಾರಿಸಿ ನನ್ನ ಮೇಲಾಧಿಕಾರಿಗಳ ಮೂಲಕ ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿರುತ್ತೇನೆ. ಆರೋಪಿಯ ತಂದೆಯ ಮನೆಯು 13 .5 ಲಕ್ಷ ಬೆಲೆ ಬಾಳುತ್ತಿತ್ತು. ಲೋಕಾಯುಕ್ತ ಪೊಲೀಸರು ನನಗೆ ಸಲ್ಲಿಸಿರುವ ಮನವಿಯನ್ನು ನಿ.ಪಿ. 6 ಹಾಗೂ ನಾನು ತಯಾರಿಸಿರುವ ಎಸ್ಟಿಮೇಟನ್ನು ನಿ.ಪಿ. 7 ಎಂದು, ನಿಪಿ-7 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಗಿದೆ ( ಪುಟ ಸಂಖ್ಯೆಃ 2082 ರಿಂದ 2117 - ವಾಲ್ಯೂಮ್ -9).

ಪಾಟೀಸವಾಲುಃ ಆರೋಪಿಗಳ ಪರ ಶ್ರೀ. ವಕೀಲರಿಂದಃ -

2. ಆರೋಪಿಯ ತಂದೆಯವರು ಮನೆಯ ನಕ್ಷೆಯನ್ನು ಹಾಜರುಪಡಿಸದ ಕಾರಣ, ಸಂಬಂದಪಟ್ಟ ಅಧಿಕಾರಿಗಳಿಂದ ಅನುಮೋದನೆ ಪಡೆದಿರುವುದಿಲ್ಲ ಎಂದು ನನ್ನ ವರದಿಯಲ್ಲಿ ನಮೂದಿಸಿರುತ್ತೇನೆ. ಆರೋಪಿಯ ತಂದೆಯ ಮನೆಗೆ ನಾನು ದಿಃ20-04-2011 ರಂದು ಬೇಟಿ ನೀಡಿರುತ್ತೇನೆ. ಆ ಸಂದರ್ಭದಲ್ಲಿ ಆರೋಪಿಯ ತಂದೆ ಮನೆಯಲ್ಲಿದ್ದರು. ಆರೋಪಿಯ ತಂದೆಯ ಬಳಿ ಮನೆಯನ್ನು ಯಾವ ಇಸವಿಯಲ್ಲಿ ಕಟ್ಟಲಾಯಿತು ಎಂದು ನಾನು ವಿಚಾರಿಸಿರುತ್ತೇನೆ. ಆಗ ಆರೋಪಿಯ ತಂದೆ ಯಾವ ಉತ್ತರವನ್ನು ನೀಡಲಿಲ್ಲ. ಸದರಿ ಮನೆಯ ಖಾತಾ ಸಂಖ್ಯೆ ನನಗೆ ಗೊತ್ತಿಲ್ಲ. ಲೋಕಾಯುಕ್ತ

**Spl.C.No.33/2012**
**P.W.-03**
**Addl.Witness-01**

ಪೊಲೀಸರು ಆರೋಪಿಯ ತಂದೆಯ ಮನೆಯ ಗೃಹಪ್ರವೇಶದ ಪತ್ರಿಕೆಯನ್ನು ನನಗೆ ಕೊಟ್ಟಿರುತ್ತಾರೆ, ಸದರಿ ಗೃಹಪ್ರವೇಶದ ಪತ್ರಿಕೆಯಂತೆ ಮನೆಯ ಗೃಹಪ್ರವೇಶವನ್ನು ದಿಃ 12-11-1997 ರಂದು ಜರುಗಿಸಲಾಯಿತು ಎಂದು ನಮೂದಿಸಲಾಗಿದೆ. ಆದ ಕಾರಣ ಮೌಲ್ಯಮಾಪನವನ್ನು 96-97 ನೇ ಸಾಲಿನ ಆದಾರದ ಮೇಲೆ ನಿಗದಿಪಡಿಸಲಾಯಿತು. ಗೃಹಪ್ರವೇಶದ ಪತ್ರಿಕೆಯ ಮೂಲಪ್ರತಿಯನ್ನು ನನಗೆ ಹಾಜರುಪಡಿಸಿರುವುದಿಲ್ಲ. ಕಟ್ಟಡವನ್ನು ಯಾವ ವರ್ಷದಲ್ಲಿ ಕಟ್ಟಲಾಯಿತು ಎಂದು ಕಟ್ಟಡವನ್ನು ನೋಡಿ ನಾನು ಪರಿಶೀಲಿಸಿರುವುದಿಲ್ಲ. ಸದರಿ ಮನೆಯು ರಸ್ತೆಯ ಬದಿಯಲ್ಲಿ ಇರುತ್ತದೆ. ಸದರಿ ಮನೆಗೆ ತೆರಿಗೆ ಕಟ್ಟಿದ ಬಗ್ಗೆ ಯಾವ ದಾಖಲೆಯನ್ನು ಪರಿಶೀಲಿಸಿರುವುದಿಲ್ಲ. ಸದರಿ ಮನೆಯು ಹೊಸದಾಗಿ ಕಟ್ಟಿದಂತಹ ಮನೆಯಾಗಿರುತ್ತದೆ.

3. ಆರೋಪಿಯ ತಂದೆಯವರ ಮನೆಯು 1989 ನೇ ಇಸವಿಯಲ್ಲಿ ಕಟ್ಟಲಾಗಿದೆ ಎಂದರೆ ಸರಿಯಲ್ಲ. ಆರೋಪಿಯ ತಂದೆಯು 1988 ರಲ್ಲಿ ಮನೆ ಕಟ್ಟಲು ಪರವಾನಿಗೆಯನ್ನು ಹಾಗೂ 1989 ರಲ್ಲಿ ನಕ್ಷೆಯ ಅನುಮೋದನೆಯನ್ನು ಪಡೆದಿರುತ್ತಾರೆಂದರೆ ಸರಿಯಲ್ಲ. 1989 ರಿಂದ 1997 ರವರೆಗೆ ಆರೋಪಿಯ ತಂದೆಯು ಮನೆಯ ತೆರಿಗೆಯನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-7 ಅಂದಾಜು ಪಟ್ಟಿಯಾಗಿರುತ್ತದೆ ಎಂದರೆ ಸರಿ. ಗೃಹಪ್ರವೇಶದ ದಾಖಲೆಯನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ದಾಖಲೆ ಇರಲಿಲ್ಲ. ಗೋಡೆಯ ಪಾಯವನ್ನು 1 ಮೀಟರ್ ಗಳ ಆಳದಷ್ಟನ್ನು ತೆಗೆದು ಪರಿಶೀಲಿಸಿರುತ್ತೇನೆ. ತೆಗೆದು ನೋಡಿದಾಗ 1997 ನೇ ಇಸವಿಯಲ್ಲಿಯೇ ಕಟ್ಟಡವನ್ನು ಕಟ್ಟಲಾಯಿತು ಎಂದು ನನಗೆ ತಿಳಿದುಬಂದಿರುತ್ತದೆ. ಕಟ್ಟಡದ ವಯಸ್ಸನ್ನು ನನಗೆ ಹೇಳಲು ಬರುವುದಿಲ್ಲ. ಮೂರು ಮಹಡಿಗಳಿಗೂ ಸಹ ನೆಲಕ್ಕೆ ಗ್ರಾನೈಟನ್ನು ಹಾಕಲಾಗಿತ್ತು. ಗ್ರಾನೈಟನ ಬಣ್ಣವನ್ನು ನನಗೆ ಈಗ ಹೇಳಲು ಸಾಧ್ಯವಿಲ್ಲ. ಗ್ರಾನೈಟನ್ನು ಯಾವ ವರ್ಷ ಹಾಕಲಾಯಿತು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಮೂರು ಮಹಡಿಗಳನ್ನು ಸಹ ಒಂದು ವರ್ಷದ ಕಾಲದಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಎಂದು ನಾನು ಅಂದಾಜುಮಾಡಿರುತ್ತೇನೆ. ನಾನು ನನ್ನ ವರದಿಯನ್ನು ವೈಜ್ಞಾನಿಕವಾಗಿ ಮಾಡಿರುವುದಿಲ್ಲ ಎಂದರೆ ಸರಿ. ಗೋಡೆಗಳನ್ನು ಹೊಸದಾಗಿ ಕಟ್ಟಲಾಗಿದೆ. ಕಟ್ಟಡವನ್ನು 1996-97 ನೇ ಇಸವಿಯಲ್ಲಿ ಕಟ್ಟಲಾಗಿದೆ ಎಂದು ನಾನು ವರದಿಯನ್ನು ನೀಡಿರುತ್ತೇನೆ. ಕಟ್ಟಡವನ್ನು 1997 ರ ಮೊದಲೇ ಕಟ್ಟಲಾಗಿದೆಯೋ ಎಂಬುದರ ಬಗ್ಗೆ ನನಗೆ ಮಾಹಿತಿ ಇಲ್ಲ. ಆರೋಪಿಯ ತಂದೆಯು ಕಟ್ಟಡ ಕಟ್ಟಲು ಸಾಮಾಗ್ರಿಯನ್ನು ಖರೀದಿಸಿದ ಬಗ್ಗೆ ದಾಖಲೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ನಾನು ವರದಿಯನ್ನು ತಯಾರಿಸಿದಂತಹ ಸಂದರ್ಭದಲ್ಲಿ ಆರೋಪಿಯ ತಂದೆಯ ಮನೆಯು ಗ್ರಾಮಪಂಚಾಯಿತಿಯ ಮಿತಿಯೊಳಗೆ ಬರುತ್ತಿತ್ತು. ಮನೆಗೆ ಸಂಬಂಧಿಸಿದಂತೆ ಗ್ರಾಮಪಂಚಾಯಿತಿಯಿಂದ ದರದ ಬಗ್ಗೆ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ.

**Spl.C.No.33/2012**
**P.W.-03**
**Addl.Witness-01**

4. ವರದಿಯೊಂದಿಗೆ ಲಗತ್ತಿಸಿರುವ ನಕ್ಷೆಯು ನಾನು ತಯಾರಿಸಿರುವ ನಕ್ಷೆಯಾಗಿರುತ್ತದೆ. ಸದರಿ ನಕ್ಷೆಯನ್ನು ಸ್ಥಳದಲ್ಲಿ ತಯಾರಿಸಲಾಯಿತು. ಸದರಿ ಸಂದರ್ಭದಲ್ಲಿ ಲೋಕಾಯುಕ್ತ ಪೋಲಿಸರಾದ ಗೋಪಾಲಕೃಷ್ಣ, ನಾನು ಹಾಗೂ ಮತ್ತೊಬ್ಬ ಸಾಕ್ಷಿ ಹಾಜರಿದ್ದರು. ಅವರುಗಳ ಸಹಿಯನ್ನು ನಾನು ಪಡೆದುಕೊಂಡಿರುವುದಿಲ್ಲ. ಸ್ಥಳದಲ್ಲಿ ಕಚ್ಚಾನಕ್ಷೆಯನ್ನು ತಯಾರಿಸಿ, ಕಛೇರಿಯಲ್ಲಿ ನಕ್ಷೆಯನ್ನು ತಯಾರಿಸಿರುತ್ತೇನೆ. ಕಚ್ಚಾನಕ್ಷೆಯನ್ನು ನಾನು ವರದಿಯಲ್ಲಿ ಹಾಜರುಪಡಿಸಿರುವುದಿಲ್ಲ. ಕಚ್ಚಾನಕ್ಷೆಗೆ ಸ್ಥಳದಲ್ಲಿ ಹಾಜರಿದ್ದವರ ಸಹಿಯನ್ನು ಪಡೆದುಕೊಂಡಿರುವುದಿಲ್ಲ. ಕಚ್ಚಾನಕ್ಷೆಗೆ ಹಾಗೂ ನಾನು ಹಾಜರುಪಡಿಸಿರುವ ನಕ್ಷೆಗೆ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗಳು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಕ್ಷೆಗೆ ಸಹಿ ಮಾಡಿರುತ್ತಾರೆ. ಕಚ್ಚಾ ನಕ್ಷೆಯನ್ನು ಈಗ ನ್ಯಾಯಾಲಯಕ್ಕೆ ಹಾಜರುಪಡಿಸಲು ಸಾಧ್ಯವಿಲ್ಲ. ನನ್ನ ವರದಿಯನ್ನು ದಾಖಲೆಗಳ ಆಧಾರದ ಮೇಲೆ ತಯಾರಿಸಿರುತ್ತೇನೆ ಎಂದರೆ ಸರಿ. ಪುಟ ಸಂಖ್ಯೆ 2084 ರಿಂದ 2111 ನ್ನು ನಮ್ಮ ಕಛೇರಿಯಲ್ಲಿ ತಯಾರುಮಾಡಲಾಯಿತು ಎಂದರೆ ಸರಿ. ಸ್ಥಳದಲ್ಲಿ ನಾವು ಕೇವಲ ಕಟ್ಟಡದ ಅಳತೆಯನ್ನು ಮಾಡಲಾಯಿತು ಹಾಗೂ ದರವನ್ನು ಕಛೇರಿಯಲ್ಲಿ ಬಂದು ನಿಗದಿಪಡಿಸಲಾಯಿತು.

5. ಕಟ್ಟಡವನ್ನು 1989 ರಲ್ಲಿಯೇ ಕಟ್ಟಲಾಗಿದ್ದರೂ ಸಹ ನಾನು ಗೃಹಪ್ರವೇಶದ ಪತ್ರದ ಆದಾರದ ಮೇಲೆ ನಾನು ಕಟ್ಟಡದ ಮೌಲ್ಯಮಾಪವನ್ನು ತಪ್ಪಾಗಿ 1997 ರ ದರದ ಆದಾರದ ಮೇಲೆ ನಿಗದಿಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲಾ.
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.